



ಸುರಂಗದ ಜಲಪ್ರವಾಹ ಕಡಿಮೆಯಾಗುವ ಲಕ್ಷಣಗಳಿಲ್ಲ. ಆದ್ದರಿಂದ ಮಳೆಗಾಲ ಮುಗಿಯುವವರೆಗೆ ಅಂದರೆ ಇನ್ನೂ ಮೂರು ತಿಂಗಳು ಅಲ್ಲಿಯೇ ಅವರಿದ್ದು ಆನಂತರ ನೀರು ಇಳಿದಾಗ ಅವರು ನಡೆದು ಬಂದರೆ ಹೇಗೆ? ಅಥವಾ ಈಗ ಬಾಲಕರಿರುವ ಸ್ಥಳದ ಮೇಲಿನಿಂದ ಗುಡ್ಡ ಕೊರೆದು ನೇರ ಸುರಂಗ ಮಾಡಿ ಹಗ್ಗದ ಮೂಲಕ ಮೇಲಕ್ಕೆತ್ತಬಹುದೇ.. ಇತ್ಯಾದಿ ಬಗೆಬಗೆಯ ಮಾರ್ಗೋಪಾಯಗಳ ಕುರಿತು ರಕ್ಷಣಾಪಡೆ ತಜ್ಞರ ಜೊತೆ ಉನ್ನತ ಮಟ್ಟದ ಸಮಾಲೋಚನೆ ನಡೆಸತೊಡಗಿತು.

## ಕಾರ್ಯಾಚರಣೆಯ ಕಷ್ಟ

ಪಂಪ್ ಹಚ್ಚಿ ನೀರನ್ನು ಹೊರಗೆ ಹಾಕಿದಷ್ಟೂ ಒಳಗೆ ಮತ್ತೆ ಮತ್ತೆ ಖಾಲಿ ಇದ್ದ ಸಂದುಗೊಂದುಗಳಲ್ಲಿ ತುಂಬತೊಡಗಿತ್ತು. ಒಮ್ಮೊಮ್ಮೆ ಇದೂ ವ್ಯರ್ಥ ಪ್ರಯತ್ನವೇ ಎನಿಸುವಷ್ಟು ನಿಧಾನಗತಿ. ಒಂದು ತಾಸು ಪಂಪ್ ಉರಿಸಿದರೆ ನೀರಿನ ಮಟ್ಟದಲ್ಲಿ ಬರೀ ಎರಡು ಸೆ.ಮೀ. ಇಳಿಕೆ! ಗುಡ್ಡ ಕೊರೆದು ಒಳಗೆ ಇಣುಕುವ ಕಾರ್ಯವೂ ಅಸಾಧ್ಯ. ಎಡೆಬಿಡದೆ ಸುರಿಯುವ ಮಳೆ. ಅಂಕುಡೊಂಕಾದ ಗುಡ್ಡದ ಏರಿಳಿತದೊಡನೆ ಬೆಸೆದ ಸುರಂಗ ಮಾರ್ಗ, ಒಳಗೆ ಕಡುಗತ್ತಲೆ, ಹರಿದು ಬರುತ್ತಿರುವ ಪ್ರವಾಹ.

'ಮಕ್ಕಳಿಗೆ ಸುರಂಗದಲ್ಲಿ ಆಮ್ಲಜನಕ ಕಡಿಮೆಯಾಗುತ್ತಿದೆ, ತಡ ಮಾಡಬೇಡಿ, ಅವರ ಮಾನಸಿಕ ಸ್ಥೈರ್ಯ ಕುಂದಲು ಬಿಡಬೇಡಿ' ಎಂದರು ವೈದ್ಯರು. 'ಆ ಮಕ್ಕಳಿಗೆ ಈಜು ಗೊತ್ತಿಲ್ಲ, ನಾಲ್ಕು ಕಿ.ಮೀ ದೂರದ ನೀರು ತುಂಬಿದ ಸುರಂಗದಿಂದ ಅವರನ್ನು ಹೇಗೆ ಕರೆ ತರ್ತೀರಿ?' ಎನ್ನುವುದು ಅಧಿಕಾರಿಗಳ ವಿಚಾರಣೆ.

ಬಾಲಕರಿಗೆ ಮುಖಕ್ಕೆ ಮಾಸ್ಕ್ ಧರಿಸುವ, ನೀರಿನೊಳಗೆ ಡೈವ್ ಮಾಡುವ ಸುಲಭ ವಿಧಾನಗಳ ಪಾಠ ಆರಂಭವಾಯಿತು. ಆಮ್ಲಜನಕ ತುಂಬಿದ ಟ್ಯೂಬುಗಳನ್ನು ತಜ್ಞರು ಬಾಲಕರ ಬಳಿಗೆ ಹೊತ್ತೊಯ್ದರು. ಈ ನಡುವೆ ಒಂದು ಅವಘಡವೂ ಸಂಭವಿಸಿತು. ಆಮ್ಲಜನಕದ ಖಾಲಿ ಸಿಲಿಂಡರನ್ನು ಹೊತ್ತು ನೀರಿನಲ್ಲಿ ಮುಳುಗು ಹಾಕಿ ಮರಳುತ್ತಿದ್ದ ಸೈನಿಕ ಮೂವತ್ತೆಂಟು ವರ್ಷದ ಸಮನ್ ಕುನನ್ ಉಸಿರಾಡಲು ಗಾಳಿ ಕಡಿಮೆಯಾಗಿ ಮಾರ್ಗಮಧ್ಯದಲ್ಲಿ ಅಸುನೀಗಿದ.

ಥಾಯ್ಲಂಡಿನಲ್ಲಿ ಜುಲೈನಿಂದ ಅಕ್ಟೋಬರ್‌ವರೆಗೆ ಮಳೆಗಾಲ. ಆ ಕಾಲದಲ್ಲಿ ಚಾರಣವೂ ಬೇಡ, ಸುರಂಗದೊಳಕ್ಕೆ ನುಗ್ಗುವ ಸಾಹಸವೂ ಬೇಡ ಎಂದು ಗುಹೆಯ ಬಾಗಿಲ ಬಳಿಯ ಫಲಕ ಎಚ್ಚರಿಸಿತ್ತು. ಮಳೆಯ ಸುಳಿವಿಲ್ಲದ ವೇಳೆ ಒಳಹೊಕ್ಕ ಫುಟ್‌ಬಾಲ್ ತಂಡ ಅಪಾಯಕ್ಕೆ ಸಿಲುಕಿಕೊಂಡಿದ್ದು ಆಕಸ್ಮಿಕವೇ.

ಸತತ ನೀರನ್ನು ಹೊರತೆಗೆದ ಮೇಲೆ ಒಂದೂವರೆ ಕಿ.ಮೀ. ದೂರದವರೆಗೆ ನಡೆದು ಹೋಗುವಷ್ಟು ನೀರಿನ ಮಟ್ಟ ಇಳಿಯಿತು. ಅಂತೂ ಭಾನುವಾರ, ಜುಲೈ ಎಂಟರಂದು ಫುಟ್‌ಬಾಲ್ ತಂಡ ಅಪಾಯಕ್ಕೆ ಸಿಲುಕಿ 15 ದಿನಗಳ ನಂತರ 'ಇಂದೇ ಮಕ್ಕಳನ್ನು ಹೊರತರುವ ಕಾರ್ಯಾಚರಣೆ ಆರಂಭವಾಗಲಿದೆ' ಎಂದು ರಕ್ಷಣಾಪಡೆ ಘೋಷಿಸಿತು. ಅಂದು ಆಸ್ಟ್ರೇಲಿಯಾದ ನುರಿತ ಡೈವರ್ ಹಾಗೂ ಸ್ವತಃ ಒಬ್ಬ ವೈದ್ಯ ನೀರೊಳಗೆ ಈಜಿ ಹೋಗಿ ಮಕ್ಕಳನ್ನು ಭೇಟಿಯಾಗಿ ಬಂದು ಹಸಿರು ಸಂಕೇತ ನೀಡಿದ. ಅಂತೂ ಆಪರೇಷನ್ ಆರಂಭವಾಯಿತು.

### ಜಗತ್ತಿನೆಲ್ಲೆಡೆಯಿಂದ ಸಹಾಯ ಹಸ್ತ!

12 ಬಾಲಕರು ಹಾಗೂ 25ರ ಹರೆಯದ ಕೋಚ್ ಅವರನ್ನು ಜಲಸುರಂಗದಿಂದ ರಕ್ಷಿಸಲು ಎಲ್ಲೆಡೆಯಿಂದ ವಸ್ತುಗಳ, ವೈದ್ಯ, ಇಂಜಿನಿಯರ್ ಮತ್ತು ಮಿಲಿಟರಿ ತಜ್ಞರ, ಸ್ವಯಂಸೇವಕರ ಸಹಾಯ ಹರಿದು ಬಂದಿತು. ಟೆಕಿ ದೈತ್ಯ ಎಲಾನ್ ಮಸ್ಕ್ 'ವೈಲ್ಡ್ ಬೋರ್' ಹೆಸರು ಬರೆದ ಇಬ್ಬರನ್ನು ತೂರಿಸಿ ಹೊರತರಬಹುದಾದ ಪುಟಾಣಿ ಸಬ್ ಮರೀನ'ನ್ನು ತಯಾರಿಸಿ ಕಳಿಸಲು ಹೊರಟಿದ್ದ. ಆಸ್ಟ್ರೇಲಿಯಾ ಸರಕಾರ 19 ತಜ್ಞ ಈಜುಗಾರರನ್ನು ಕಳಿಸಿತು. ಆಪತ್ತಿಗೆ ಸಿಲುಕಿದ ಹುಡುಗರನ್ನು ಮೊದಲು ಪತ್ತೆ ಮಾಡಿದ್ದು ಬ್ರಿಟಿಷ್ ಮುಳುಗು ತಜ್ಞರಾದ ರಿಕ್ ಮತ್ತು ಜಾನ್ ಜೋಡಿ. ಚೀನಾದ ಬೀಜಿಂಗ್‌ನಿಂದ ಆರು ರಕ್ಷಣಾ ವಿಶೇಷಜ್ಞರು, ಅಮೆರಿಕದ ಮೂವತ್ತಾರು ಸೈನಿಕರ ಪಡೆ ಥಾಯ್ಲಂಡಿಗೆ ಬಂದಿಳಿದಿದ್ದವು.

13 ಅಂಬುಲೆನ್ಸ್‌ಗಳು ಮತ್ತು ಹಲವು ಹೆಲಿಕಾಪ್ಟರ್‌ಗಳು ಮಕ್ಕಳನ್ನು ಆಸ್ಪತ್ರೆಗೆ ಒಯ್ಯಲು ಸಿದ್ಧವಾಗಿ ನಿಂತವು. ಚಿಯಾಂಗ್ ರೈ ನ ಆಸ್ಪತ್ರೆಯ ಎದುರೂ ಪೋಲಿಸ್ ಕಾವಲು.

ಭಾನುವಾರ ಹೊರತರುವ ಸಿದ್ಧತೆ ಪೂರ್ಣಗೊಂಡಿತು. ಗುಹೆಯ ದ್ವಾರದಿಂದ ಒಂದೂವರೆ ಕಿ.ಮೀ.ವರೆಗೆ ನೀರಿನ ಸೆಳೆತ, ಆಳ ಕಡಿಮೆ ಇದ್ದು ನಡೆಯುವಷ್ಟಾಗಿತ್ತು. ಆ ದೂರವನ್ನು ಥರ್ಡ್ ಚೇಂಬರ್ ಎಂದು ಗುರುತಿಸಲಾಯಿತು. 18 ಮಂದಿ ಅತ್ಯಂತ ಚುರುಕಿನ ಮುಳುಗುತಜ್ಞರು ಮುಖಕ್ಕೆ ಮಾಸ್ಕ್ ಉದ್ದ ದಪ್ಪನೆಯ ಹಗ್ಗಗಳು, ಆಕ್ಸಿಜನ್ ಸಿಲಿಂಡರ್ ಹೊತ್ತು ಬೆಳಿಗ್ಗೆ ಹತ್ತು ಗಂಟೆಗೆ ಗುಹೆ ಹೊಕ್ಕರು. ರಾತ್ರಿ ಹತ್ತರ ವೇಳೆಗೆ ಮೊದಲ ಹುಡುಗ ಹೊರಬರುವನೆಂಬ ನಿರೀಕ್ಷೆ. ಇಡೀ ಜಗತ್ತೇ ಥಾಯ್ಲೆಂಡಿನಿಂದ ಬರುವ ಸುದ್ದಿಗಾಗಿ ಕಾಯತೊಡಗಿತ್ತು. ನಿರೀಕ್ಷೆಗೂ ಮೀರಿ, ಕಾರ್ಯಪಡೆಯ ಮುಳುಗು ತಜ್ಞರು ಮೊದಲ ದಿನ ನಾಲ್ಕು ಮಕ್ಕಳನ್ನು ಸುರಕ್ಷಿತವಾಗಿ ಹೊರತಂದರು.

ಕೊನೆಗೂ ಹದಿನೆಂಟನೇ ದಿನ ಪವಾಡ ಪೂರ್ಣಗೊಂಡಿತು. ಉಳಿದ ಒಂಭತ್ತು ಜನರು ಹದಿನೆಂಟು ಕರಾಳ ದಿನಗಳ ನಂತರ ಹೊರಜಗತ್ತಿಗೆ ಕಾಲಿಟ್ಟರು. ಕೊನೆಯ ತಂಡದ ಜತೆಗೆ ಹೊರಬಂದವನು ಆಸ್ಟ್ರೇಲಿಯಾದ ತಜ್ಞ ಮುಳುಗುಗಾರ ಮತ್ತು ವೈದ್ಯ ಡಾ. ರಿಚರ್ಡ್ ಹ್ಯಾರಿಸ್. ಆದರೆ ಆತ ಗುಹೆಯಿಂದ ಹೊರಬಂದಾಗ ಆತನ ತಂದೆಯ ನಿಧನದ ಸುದ್ದಿ ಬಂದೆರಗಿದ್ದೂ ಹರ್ಷದ ಮಧ್ಯೆ ನೋವಿನ ಅಲೆ ಎಬ್ಬಿಸಿದ್ದು ಸುಳ್ಳಲ್ಲ.

ಮೊದಲ ಹತ್ತು ದಿನಗಳ ಕಾಲ ಕೋಚ್ ಎಕ್ಕಪೊಲ್ ತಂಡದ ಹುಡುಗರನ್ನು ಸುರಂಗದ ಒಳಗೇ ಕುಳಿತು ಇಂತಹ ಇಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುವ ಧೈರ್ಯ ತುಂಬಿದ್ದೂ ಈಗ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಒಂದಷ್ಟು ಸಮಯ ಸ್ವತಃ ಬೌದ್ಧ ಧರ್ಮಗುರುವಾಗಿದ್ದ ಆತ, ಹುಡುಗರಿಗೆ ಇದ್ದ ಆಹಾರವನ್ನೇ ಸ್ವಲ್ಪ ಸ್ವಲ್ಪವೇ ಹಂಚಿ, ಬದುಕುವ ಧೈರ್ಯ ತುಂಬಿದ್ದ. ಮಾನಸಿಕ ತುಮುಲಗಳನ್ನು ನಿಯಂತ್ರಣದಲ್ಲಿ ಇಡಲು ಧ್ಯಾನದ ಮಾರ್ಗ ಹೇಳಿಕೊಟ್ಟಿದ್ದ!

ಎಂಟು ವರ್ಷಗಳ ಹಿಂದೆ ಚಿಲಿ ದೇಶದಲ್ಲಿ 2300 ಅಡಿ ಗಣಿಯಾಳದಲ್ಲಿ ಸಿಲುಕಿಕೊಂಡ 33 ಅಮಾಯಕ ಜನರ ಪರಿಸ್ಥಿತಿ ನೆನಪಾಗುತ್ತಿದೆ. ಅರವತ್ತೊಂಭತ್ತು ದಿನಗಳ ನಂತರ ಅವರ ಕೂದಲೂ ಕೊಂಕದ ಹಾಗೆ ಹೊರಜಗತ್ತಿಗೆ ತಂದಿದ್ದು ಅಂದಿನ ಸಾಧನೆಯಾದರೆ, ಇಂದೂ ಕೂಡ ಮಾನವನ ಸಾಹಸ ಪ್ರವೃತ್ತಿ ಹಾಗೂ ಇಚ್ಛಾಶಕ್ತಿ ಮೇಲುಗೈ ಆಗಿ ಹದಿಮೂರು ಬಾಲಕರನ್ನು ಹದಿನೈದು ದಿನಗಳ ನಂತರ ಕತ್ತಲೆಯ ಗವಿಯಿಂದ ಮುಕ್ತಿಗೊಳಿಸಿ ಈ ಸುಂದರ ಜಗತ್ತಿಗೆ ಮರಳಿ ತಂದಿದೆ.